ನಿವಾಸಿಗಳಿಗಾಗಿ (ವ್ಯಕ್ತಿಗಳಿಗೆ) ಫೊರೆಕ್ಸ್ ಸೌಲಭ್ಯಗಳು

ವಿದೇಶಿ ವಿನಿಮಯ ಇಲಾಖೆ

ವಿದೇಶಿ ಸಂದಾಯಗಳ ವಿಭಾಗ

ನಿವಾಸಿಗಳಿಗಾಗಿ (ಜನವರಿ 1, 2006 ರಂದು ಇದ್ದಂತೆ) ವಿದೇಶಿ ವಿನಿಮಯ ಸೌಲಭ್ಯಗಳು

ಪೀಠಿಕೆ:

ಭಾರತದಲ್ಲಿ ವಿನಿಮಯ ನಿಯಂತ್ರಣದ ಆಡಳಿತಕ್ಕಾಗಿ ಕಾನೂನು ಚೌಕಟ್ಟನ್ನು ವಿದೇಶಿ ವಿನಿಮಯ ವ್ಯವಸ್ಥಾಪನೆ ಅಧಿನಿಯಮ, 1999ರ ಮೂಲಕ ಒದಗಿಸಲಾಗಿದೆ. ಈ ಅಧಿನಿಯಮದ ಅಡಿಯಲ್ಲಿ ಪ್ರಸಕ್ತ ಲೆಕ್ಕಪತ್ರ ವ್ಯವಹಾರಗಳನ್ನು ಕೈಗೊಳ್ಳುವುದಕ್ಕೆ ವಿದೇಶಿ ವಿನಿಮಯವನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಸ್ವಾತಂತ್ರ್ಯವನ್ನು ನೀಡಲಾಗಿದೆ. ಆದಾಗ್ಯೂ, ಚಾಲ್ತಿ ಲೆಕ್ಕಪತ್ರ ವ್ಯವಹಾರಗಳ ಮೇಲೆ ಯುಕ್ತ ನಿರ್ಬಂಧಗಳನ್ನು ವಿಧಿಸಲು ರಿಜರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರದಲ್ಲಿ ಅಧಿಕಾರಗಳನ್ನು ನಿಹಿತಗೊಳಿಸಲಾಗಿದೆ. ತದನುಸಾರವಾಗಿ, ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಸರ್ಕಾರವು ಅಧಿಸೂಚನೆ ಜಿಎಸ್ಆರ್. 381 (ಇ) ದಿನಾಂಕ ಮೇ 3, 2000 ಮತ್ತು ಎಸ್ಓ 301 (ಇ) ದಿನಾಂಕ ಮಾರ್ಚ್ 30, 2001, ಹೊರಡಿಸಿದೆ. ಕೊನೆಯ ತಿದ್ದುಪಡಿಯು ಸಾರ್ವಜನಿಕ ಹಿತಾಸಕ್ತಿಯಲ್ಲಿ ಚಾಲ್ತಿ ಲೆಕ್ಕಪತ್ರ ವ್ಯವಹಾರಗಳ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 608 (ಇ) ದಿನಾಂಕ ಸೆಪ್ಟೆಂಬರ್ 13, 2004 ರಂದು ಹೊರಡಿಸಿದೆ.

ಈ ವಿವರಗಳು ಬ್ಯಾಂಕಿನ ವೆಬ್‌ಸೈಟ್ ಹಾಗೂ ಅಧಿಕೃತ ಡೀಲರ್‌ಗಳು ಮತ್ತು ವಿದೇಶಿ ವಿನಿಮಯ ಇಲಾಖೆಯ ಆದೇಶ ಕಚೇರಿಗಳಲ್ಲಿ ಲಭ್ಯವಿರುತ್ತವೆ. ಪದೇಪದೇ ಕೇಳಲಾಗುತ್ತಿರುವ ಪ್ರಶ್ನೆಗಳಿಗೆ ಸರಳ ಭಾಷೆಯಲ್ಲಿ ಅಂಥ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಗಳನ್ನು ಮಾಡಿವೆ.

ವಿದೇಶಿ ವಿನಿಮಯ ವ್ಯವಸ್ಥಾಪನ ಅಧಿನಿಯಮ, 1999 (ಎಫ್ಇಎಫ್ಎ) ಜೂನ್ 1, 2000 ದಿಂದ ಜಾರಿಗೆ ಬಂದಿರುತ್ತದೆ. ಹೊಸ ಅಧಿನಿಯಮದ ಪ್ರಾರಂಭದೊಂದಿಗೆ (ಎಫ್ಇಆರ್ಎ ಸ್ಥಳದಲ್ಲಿ) ಕೆಲವು ಮೂಲಭೂತ ಬದಲಾವಣೆಗಳನ್ನು ಮಾಡಲಾಗಿದೆ ಮತ್ತು ವಿದೇಶಿ ವಿನಿಮಯವನ್ನು ಒಳಗೊಳ್ಳುವ ಎಲ್ಲಾ ವ್ಯವಹಾರಗಳನ್ನು ಬಂಡವಾಳ ಅಥವಾ ಚಾಲ್ತಿ ಖಾತೆ ವ್ಯವಹಾರಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ನಿವಾಸಿಯು ಕೈಗೊಂಡ ಎಲ್ಲಾ ವ್ಯವಹಾರಗಳು, ಚಾಲ್ತಿ ಖಾತೆಗಳ ವ್ಯವಹಾರಗಳಾಗಿದ್ದು ಭಾರತದ ಹೊರಗಡೆ ಆತನ ಆಸ್ತಿಗಳು ಅಥವಾ ಹೊಣೆಗಾರಿಕೆಗಳನ್ನು ಬದಲಾಯಿಸುವುದಿಲ್ಲ. ವಿದೇಶಿ ವಿನಿಮಯ ವ್ಯವಸ್ಥಾಪನಾ ಅಧಿನಿಯಮದ 5ನೇ ಪ್ರಕರಣದ ಅನುಸಾರವಾಗಿ ಕೇಂದ್ರ ಸರ್ಕಾರವು ನಿರ್ಬಂಧಗಳನ್ನು ವಿಧಿಸಿರುವಂತ ವ್ಯವಹಾರಗಳ ಹೊರತಾಗಿ ಯಾವುದೇ ಚಾಲ್ತಿ ಖಾತೆ ವ್ಯವಹಾರಗಳಿಗಾಗಿ ವಿನಿಮಯವನ್ನು ಖರೀದಿಸಲು ಅಥವಾ ಮಾರಾಟ ಮಾಡಲು ವ್ಯಕ್ತಿಗಳು ಮುಕ್ತರಾಗಿರುತ್ತಾರೆ. ನೋಡಿ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 381 (ಇ) ದಿನಾಂಕ ಮೇ, 3, 2000 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ) ಸದರಿ ಅಧಿಸೂಚನೆಯ ಪೂರ್ಣ ಪಾಠವು ಸರ್ಕಾರಿ ರಾಜ್ಯಪತ್ರದಲ್ಲಿ ಲಭ್ಯವಿದೆ. ನಮ್ಮ ವೆಬ್‌ಸೈಟಿನಲ್ಲಿ ಲಭ್ಯವಿರುವ ಸಂಕೀರ್ಣ ಇರಸಾಲುಗಳ ಮೇಲೆ ನಮ್ಮ ಮಾಸ್ಟರ್ ಸುತ್ತೋಲೆಗೆ ಅನುಬಂಧವೆಂದು ಅದು ಲಭ್ಯವಾಗುತ್ತವೆ.

www.mastercirculars.rbi.org.in

I. ಪ್ರಯಾಣಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಮಾರ್ಗದರ್ಶನ ಸೂತ್ರಗಳು:

1. ನಿವಾಸಿ ಯಾರು?

ಎಫ್‌ಇಎಂಎ 1999ರ (ಪ್ರಕರಣ 2) (v) ಅನುಸಾರ 'ಭಾರತದಲ್ಲಿ ನಿವಾಸಿ ವ್ಯಕ್ತಿ' ಎಂದರೆ 1 ಹಿಂದಿನ ಹಣಕಾಸು ವರ್ಷದಲ್ಲಿ ಒಂದುನೂರಾ ಎಂಬತ್ತೆರಡು ದಿವಸಗಳಿಗಿಂತ ಹೆಚ್ಚಿಗೆ ಭಾರತದಲ್ಲಿ ವಾಸವಾಗಿರುವ ವ್ಯಕ್ತಿ, ಆದರೆ

(ಎ) ಭಾರತದ ಹೊರಗಡೆ ಹೋದ ವ್ಯಕ್ತಿ ಅಥವಾ ಭಾರತದ ಹೊರಗಡೆ ತಂಗಿರುವ ವ್ಯಕ್ತಿ
ಭಾರತದ ಹೊರಗಡೆ ಉದ್ಯೋಗಕ್ಕಾಗಿ ಅಥವಾ ಅದನ್ನು ಕೈಗೊಳ್ಳಲು ಅಥವಾ
ಭಾರತದ ಹೊರಗಡೆ ವ್ಯವಹಾರವನ್ನು ನಡೆಸಲು ಅಥವಾ ಭಾರತದ ಹೊರಗಡೆ ವೃತ್ತಿಯನ್ನು ನಡೆಸುವುದಕ್ಕಾಗಿ ಅಥವಾ

ಇತರ ಯಾವುದೇ ಉದ್ದೇಶಕ್ಕಾಗಿ ಅಂಥ ಸಂದರ್ಭಗಳಲ್ಲಿ ಅನಿಶ್ಚಿತ ಅವಧಿಗಾಗಿ ಭಾರತದ ಹೊರಗಡೆ ಉಳಿಯಲು ತನ್ನ ಆಶಯವನ್ನು ಸೂಚಿಸುವ ಭಾರತದ ಹೊರಗಡೆ ಹೋಗಿರುವ ಅಥವಾ ಭಾರತದ ಹೊರಗೆ ವಾಸಿಸುವ ಒಬ್ಬ ವ್ಯಕ್ತಿ – ಇವರನ್ನು ಒಳಗೊಳ್ಳುವುದಿಲ್ಲ.

(ಬಿ) ಈ ಎರಡು ಸಂದರ್ಭಗಳಲ್ಲಿ

ಭಾರತದಲ್ಲಿ ಉದ್ಯೋಗಕ್ಕಾಗಿ ಅಥವಾ ಅದನ್ನು ಕೈಗೊಳ್ಳಲು ಅಥವಾ ಭಾರತದಲ್ಲಿ ವ್ಯವಹಾರವನ್ನು ನಡೆಸುವ ಅಥವಾ ಭಾರತದಲ್ಲಿ ವೃತ್ತಿಯನ್ನು ನಡೆಸುವ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಅಂಥ ಸಂದರ್ಭಗಳಲ್ಲಿ ಅನಿಶ್ಚಿತ ಅವಧಿಗಾಗಿ ಭಾರತದಲ್ಲಿ ಉಳಿಯಲು ತನ್ನ ಆಶಯವನ್ನು ವ್ಯಕ್ತಪಡಿಸುವ;

ಭಾರತದಲ್ಲಿ ನೋಂದಾಯಿತವಾದ ಅಥವಾ ನಿಗಮಿತವಾದ ಯಾವನೇ ವ್ಯಕ್ತಿ, ಅಥವಾ ನಿಗಮಿತ ಸಂಸ್ಥೆ;

ಭಾರತದ ಹೊರಗಡೆ ಒಬ್ಬ ನಿವಾಸಿ ವ್ಯಕ್ತಿ ಮೂಲಕ ಒಡೆತನ ಹೊಂದಿರುವ ಅಥವಾ ನಿಯಂತ್ರಿತವಾದ ಒಂದು ಕಚೇರಿ, ಶಾಖೆ, ಅಥವಾ ಏಜೆನ್ಸಿ.

ಭಾರತದಲ್ಲಿ ವ್ಯಕ್ತಿ ನಿವಾಸಿ ಮೂಲಕ ಒಡೆತನ ಹೊಂದಿರುವ ಅಥವಾ ನಿಯಂತ್ರಿತವಾದ ಭಾರತದ ಹೊರಗಡೆಯಿರುವ ಒಂದು ಕಚೇರಿ, ಶಾಖೆ ಅಥವಾ ಏಜೆನ್ಸಿ – ಹೊರತು ಭಾರತಕ್ಕೆ ಬಂದಿರುವ ಅಥವಾ ಭಾರತದಲ್ಲಿ ವಾಸಿಸುವ ವ್ಯಕ್ತಿಯನ್ನು – ಒಳಗೊಳ್ಳುವುದಿಲ್ಲ.

(2) ವಿದೇಶಿ ವಿನಿಮಯವನ್ನು ಎಲ್ಲಿಂದ ಖರೀದಿಸುವುದು?

ವಿದೇಶಿ ವಿನಿಮಯವನ್ನು ಯಾವನೇ ಅಧಿಕೃತ ಡೀಲರ್‌ನಿಂದ ಖರೀದಿಸಬಹುದು. ಅಧಿಕೃತ ಡೀಲರುಗಳಲ್ಲದೆ ಪೂರ್ಣ ಪ್ರಮಾಣದ ಹಣ ಬದಲಾವಣೆಗಾರರಿಗೆ ಕೂಡ ವ್ಯವಹಾರ ಮತ್ತು ಖಾಸಗಿ ಸಂದರ್ಶನಗಳಿಗಾಗಿ ವಿನಿಮಯವನ್ನು ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ.

(3) ಅಧಿಕೃತ ಡೀಲರ್ ಯಾರು?

ವಿದೇಶಿ ವಿನಿಮಯ ಅಥವಾ ವಿದೇಶಿ ಭದ್ರತೆಗಳಲ್ಲಿ ವ್ಯವಹರಿಸಲು (www.fedaiorg.in) ನಲ್ಲಿ ಪಟ್ಟಿ ದೊರೆಯುವುದು.) ಎಫ್‌ಇಎಂಎ 1990, ಪ್ರಕರಣ 10, (1)ರ ಅಡಿಯಲ್ಲಿ ಸಾಮಾನ್ಯವಾಗಿ ರಿಜರ್ವ್ ಬ್ಯಾಂಕಿನಿಂದ ನಿರ್ದಿಷ್ಟವಾಗಿ ಅಧಿಕೃತಗೊಳಿಸಿದ ಒಬ್ಬ ಅಧಿಕೃತ ಡೀಲರ್ ಬ್ಯಾಂಕ್ ಆಗಿರುತ್ತದೆ.

(4) ವ್ಯವಹಾರದ ಪ್ರವಾಸಗಳಿಗಾಗಿ ಎಷ್ಟು ವಿನಿಮಯವು ಲಭ್ಯವಾಗುತ್ತದೆ?

ನೇಪಾಳ ಮತ್ತು ಭೂತಾನ್ ಹೊರತುಪಡಿಸಿ, ಯಾವುದೇ ದೇಶಕ್ಕೆ ವ್ಯವಹಾರದ ಪ್ರಯಾಣಕ್ಕಾಗಿ 25,000 ಅಮೇರಿಕನ್ ಡಾಲರ್‌ರವರೆಗೆ ಅಧಿಕೃತ ಡೀಲರ್‌ಗಳು ವಿದೇಶಿ ವಿನಿಮಯವನ್ನು ಬಿಡುಗಡೆ ಮಾಡಬಹುದು. ಉಳಿಯುವ ಅವಧಿಯನ್ನು ಗಮನಕ್ಕೆ ತೆಗೆದುಕೊಳ್ಳದೇ ವ್ಯವಹಾರದ ಉದ್ದೇಶಗಳಿಗಾಗಿ (ನೇಪಾಳ ಮತ್ತು ಭೂತಾನ ಹೊರತುಪಡಿಸಿ) ವಿದೇಶಕ್ಕೆ ಪ್ರಯಾಣ ಮಾಡಲು 25,000 (ಇಪ್ಪತ್ತೈದು ಸಾವಿರ) ಅಮೇರಿಕನ್ ಡಾಲರ್ ಮೀರುವ ವಿದೇಶಿ ವಿನಿಮಯ ಬಿಡುಗಡೆಗೆ ರಿಜರ್ವ್ ಬ್ಯಾಂಕಿನಿಂದ ಪೂರ್ವಾನುಮತಿಯನ್ನು ಪಡೆಯುವುದು ಅವಶ್ಯಕವಾಗಿದೆ. ಅಂತರಾಷ್ಟ್ರೀಯ ಸಮ್ಮೇಳನ, ಸೆಮಿನಾರ್ ವಿಶಿಷ್ಟ ತರಬೇತಿ, ಅಧ್ಯಯನ ಪ್ರವಾಸ ಅಪ್ರೆಂಟಿಸ್ ತರಬೇತಿ ಇತ್ಯಾದಿಗಳಿಗೆ ಹಾಜರಾಗುವುದಕ್ಕೆ ಸಂಬಂಧಿಸಿದ ಸಂದರ್ಶನಗಳನ್ನು ವ್ಯವಹಾರದ ಸಂದರ್ಶನಗಳೆಂದು ಪರಿಗಣಿಸಲಾಗುತ್ತದೆ. ವೈದ್ಯಕೀಯ ಚಿಕಿತ್ಸೆ ಮತ್ತು/ ಅಥವಾ ತಪಾಸಣೆ ಕೂಡಾ ಈ ಪ್ರವರ್ಗದೊಳಗೆ ಬರುತ್ತದೆ.

ಪ್ರಾಸಂಗಿಕವಾಗಿ ನೇಪಾಳ ಮತ್ತು ಭೂತಾನ್‌ಗಳಿಗೆ ಯಾವುದೇ ಬಗೆಯ ಪ್ರವಾಸ ಅಥವಾ ನೇಪಾಳ ಮತ್ತು ಭೂತಾನದಲ್ಲಿರುವ ನಿವಾಸಿ ವ್ಯಕ್ತಿಗಳೊಂದಿಗೆ ಯಾವುದೇ ವ್ಯವಹಾರವನ್ನು ನಡೆಸುವುದಕ್ಕಾಗಿ ಯಾವುದೇ ವಿದೇಶಿ ವಿನಿಮಯದ ಬಿಡುಗಡೆಯು ಅಂಗೀಕಾರರ್ಹವಾಗಿರುವುದಿಲ್ಲ.

(5) ಭಾರತದ ಹೊರಗಡೆ ವೈದ್ಯಕೀಯ ಚಿಕಿತ್ಸೆಗಾಗಿ ಹೆಚ್ಚುವರಿ ವಿದೇಶಿ ವಿನಿಮಯವನ್ನು ಪಡೆಯಬಹುದೇ?

ಅಧಿಕೃತ ಡೀಲರ್‌ಗಳು ಭಾರತ/ ವಿದೇಶದಲ್ಲಿರುವ ಆಸ್ಪತ್ರೆ/ ಡಾಕ್ಟರಿಂದ ಯಾವುದೇ ಅಂದಾಜಿನ ಮೇಲೆ ಒತ್ತಾಯಪಡಿಸದೇ ಅವಶ್ಯಕ ವಿವರಗಳ ಸ್ವಯಂ ಘೋಷಣೆ ಆಧಾರದ ಮೇಲೆ ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ನಿವಾಸಿ ಭಾರತೀಯರಿಗೆ 1,00,000 ಅಮೇರಿಕನ್ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತಕ್ಕೆ ವಿದೇಶಿ ವಿನಿಮಯವನ್ನು ಬಿಡುಗಡೆ ಮಾಡಬಹುದು. ವೈದ್ಯಕೀಯ ಚಿಕಿತ್ಸೆಗಾಗಿ ವಿದೇಶವನ್ನು ಸಂದರ್ಶಿಸುವ ವ್ಯಕ್ತಿಯು ಮೇಲ್ಕಂಡ ಮಿತಿಯನ್ನು ಮೀರಿ ವಿದೇಶಿ ವಿನಿಮಯವನ್ನು ಪಡೆಯಬಹುದು. ಆದರೆ ಅದಕ್ಕೆ ಭಾರತ/ ವಿದೇಶದಲ್ಲಿನ, ಆಸ್ಪತ್ರೆ/ ವೈದ್ಯರಿಂದ ಒಂದು ಅಂದಾಜಿನ ಮೂಲಕ ಆ ಮನವಿಯು ಸಮರ್ಪಿತವಾಗಿರಬೇಕು. ಪ್ಯಾರಾ 1 ರಲ್ಲಿ ವಿವರಿಸಿರುವ ಮೊತ್ತಕ್ಕೆ ಹೆಚ್ಚುವರಿಯಾಗಿ ಈ ವಿನಿಮಯವನ್ನು ಚಿಕಿತ್ಸೆಯಲ್ಲಿ ಒಳಗೊಂಡ ವೆಚ್ಚಗಳನ್ನು ಪೂರೈಸಲು ಭರಿಸಲಾಗುತ್ತದೆ.

(6) ಭಾರತದ ಹೊರಗಡೆ ಅಧ್ಯಯನಗಳಿಗಾಗಿ ಎಷ್ಟು ವಿನಿಮಯವು ಲಭ್ಯವಾಗುತ್ತದೆ?

ಅಧ್ಯಯನಗಳಿಗಾಗಿ ವಿದೇಶಕ್ಕೆ ಹೋಗುವ ವಿದ್ಯಾರ್ಥಿಗಳನ್ನು ಅನಿವಾಸಿ ಭಾರತೀಯರೆಂದು (ಎನ್‌ಆರ್‌ಐ) ಪರಿಗಣಿಸಲಾಗುತ್ತದೆ ಮತ್ತು ಎಫ್‌ಇಎಂಎ ಮೇರೆಗೆ ಎನ್‌ಆರ್‌ಐಗಳಿಗೆ ದೊರೆಯುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ಇದರ ಜೊತೆಗೆ ನಿರ್ವಹಣೆಗೆ ಸ್ವಯಂ ಘೋಷಣೆಯ ಮೇಲೆ ಭಾರತದ ನಿಕಟ ಸಂಬಂಧಿಗಳಿಂದ 100,000 ಅಮೇರಿಕನ್ ಡಾಲರ್‌ವರೆಗೆ ಪಾವತಿಗಳನ್ನು ಪಡೆಯಬಹುದು. ಇದು ಅವರ ಅಧ್ಯಯನಗಳಿಗೂ ಮಾಡಲಾಗುವ ಪಾವತಿಗಳನ್ನು ಒಳಗೊಳ್ಳುತ್ತದೆ. ಭಾರತದಲ್ಲಿನ ನಿವಾಸಿಯೆಂದು ವಿದ್ಯಾರ್ಥಿಗಳು ಪಡೆದ ಶೈಕ್ಷಣಿಕ ಮತ್ತು ಇತರ ಸಾಲಗಳು ಮುಂದುವರಿಯಲು ಅನುಮತಿಸಬಹುದು. ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯತೆಗಳ ಸಂಬಂಧದಲ್ಲಿ ಅವರಿಗೆ ಈಗಿರುವ ಹಣ ರವಾನೆ ಸೌಲಭ್ಯಗಳಲ್ಲಿ ಯಾವುದೇ ಕೊರತೆಯಿರುವುದಿಲ್ಲ.

(7) ಭಾರತದ ಹೊರಗಿನ ದೇಶಕ್ಕೆ ಖಾಸಗಿ ಸಂದರ್ಶನಗಳ ಮೇಲೆ ವಿದೇಶಕ್ಕೆ ಪ್ರವಾಸ ಮಾಡುವಾಗ ವ್ಯಕ್ತಿಯು ಎಷ್ಟು ವಿದೇಶಿ ವಿನಿಮಯವನ್ನು ಖರೀದಿಸಬಹುದು?

ವಿದೇಶಕ್ಕೆ ಖಾಸಗಿ ಸಂದರ್ಶನಗಳು ಎಂದರೆ, ಪ್ರವಾಸೋದ್ಯಮಗಳು ಇತ್ಯಾದಿಗಳಿಗಾಗಿ ಯಾವುದೇ ಕ್ಯಾಲೆಂಡರ್ ವರ್ಷದಲ್ಲಿ 10,000 ಅಮೇರಿಕನ್ ಡಾಲರ್‌ವರೆಗೆ ವಿದೇಶಿ ವಿನಿಮಯವನ್ನು ಒಬ್ಬ ಅಧಿಕೃತ ಡೀಲರ್‌ನಿಂದ ಪಡೆಯಬಹುದು. 10,000 ಅಮೇರಿಕನ್ ಡಾಲರ್ ಮಿತಿಯು ಒಟ್ಟಿಗೆ ಅನ್ವಯವಾಗುತ್ತದೆ ಮತ್ತು ವಿದೇಶಿ ವಿನಿಮಯವನ್ನು ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಂದರ್ಶನಗಳಿಗೆ ಪಡೆಯಬಹುದು. ಆದರೆ, ಒಂದು

ಕ್ಯಾಲೆಂಡರ್ ವರ್ಷದಲ್ಲಿ ಪಡೆಯಲಾದ ಒಟ್ಟು ವಿದೇಶಿ ವಿನಿಮಯವು ಗೊತ್ತುಪಡಿಸಿದ 10,000 ಯು.ಎಸ್ ಡಾಲರ್‌ಗಳ ಮಿತಿಯನ್ನು ಮೀರತಕ್ಕದ್ದಲ್ಲ. (ಈ ಸೌಲಭ್ಯವನ್ನು ಮುಂಚೆ ಬಿ.ಟಿ.ಕ್ಯೂ. ಅಥವಾ ಎಸ್‌ಟಿಎಸ್ ಎಂದು ಕರೆಯಲಾಗುತ್ತಿತ್ತು) ಈ ಮಿತಿಯನ್ನು 10,000 ಅಮೇರಿಕನ್ ಡಾಲರ್‌ವರೆಗೆ ಉದ್ಯೋಗ ಅಥವಾ ವಲಸೆ ಅಥವಾ ವ್ಯಾಸಂಗಗಳು ಒಳಗೊಂಡಂತೆ ಯಾವುದೇ ಉದ್ದೇಶಕ್ಕಾಗಿ ವಿದೇಶಕ್ಕೆ ಪ್ರಯಾಣ ಮಾಡಲು ವಿದೇಶಿ ವಿನಿಮಯದೊಂದಿಗೆ ವ್ಯಕ್ತಿಯು ಪಡೆಯಬಹುದು. ಆದರೆ, ಯಾವುದೇ ಉದ್ದೇಶಕ್ಕಾಗಿ ನೇಪಾಳ ಮತ್ತು/ ಅಥವಾ ಭೂತಾನಕ್ಕೆ ಭೇಟಿ ನೀಡಲು ಯಾವುದೇ ವಿದೇಶಿ ವಿನಿಮಯವು ಲಭ್ಯವಾಗುವುದಿಲ್ಲ.

(8) ಉದ್ಯೋಗಕ್ಕಾಗಿ ವಿದೇಶಕ್ಕೆ ಹೋಗುವ ವ್ಯಕ್ತಿಗೆ ಎಷ್ಟು ವಿದೇಶಿ ವಿನಿಮಯ ಲಭ್ಯವಾಗುತ್ತದೆ?

ಉದ್ಯೋಗಕ್ಕಾಗಿ ವಿದೇಶಕ್ಕೆ ಹೋಗುವ ವ್ಯಕ್ತಿಯು ಸ್ವಯಂ ಘೋಷಣೆಯ ಆಧಾರದ ಮೇಲೆ ಭಾರತದಲ್ಲಿ ಯಾವನೇ ಅಧಿಕೃತ ಡೀಲರ್‌ನಿಂದ ಒಂದು ಲಕ್ಷ ಅಮೇರಿಕನ್ ಡಾಲರ್‌ವರೆಗೆ ವಿದೇಶಿ ವಿನಿಮಯವನ್ನು ಪಡೆಯಬಹುದು.

(9) ವಿದೇಶಕ್ಕೆ ವಲಸೆ ಹೋಗುವ ವ್ಯಕ್ತಿಗೆ ದೊರೆಯಬಹುದಾದ ವಿದೇಶಿ ವಿನಿಮಯ ಎಷ್ಟು?

ವಲಸೆಯ ಮೇಲೆ ವಿದೇಶಕ್ಕೆ ಹೋಗುವ ವ್ಯಕ್ತಿಯು ಭಾರತದಲ್ಲಿ ಅಧಿಕೃತ ಡೀಲರ್‌ನಿಂದ ಸ್ವಯಂ ಘೋಷಣೆಯ ಆಧಾರದ ಮೇಲೆ 100000 ಅಮೇರಿಕನ್ ಡಾಲರ್‌ವರೆಗೆ ವಿದೇಶಿ ವಿನಿಮಯವನ್ನು ಪಡೆಯಬಹುದು. ಈ ಮೊಬಲಗು ವಲಸೆ ಹೋಗುವ ದೇಶದಲ್ಲಿ ಪ್ರಾಸಂಗಿಕ ವೆಚ್ಚಗಳ್ನು ಭರಿಸಲು ಮಾತ್ರ ಆಗಿರುತ್ತದೆ. ವಿದೇಶಿ ವಿನಿಮಯದ ಯಾವುದೇ ಮೊಬಲಗನ್ನು ಪಾಯಿಂಟ್‌ಗಳನ್ನು ಗಳಿಸುವುದಕ್ಕಾಗಿ ಅಥವಾ ವಲಸೆ ಕ್ರೆಡಿಟ್‌ಗಳಿಗಾಗಿ ಅರ್ಹನಾಗಲು ಭಾರತದ ಹೊರಗಡೆ ಹಣ ರವಾನೆ ಮಾಡಲಾಗದು. ಈ ರೀತಿಯ ಎಲ್ಲಾ ರವಾನೆಗಳಿಗೆ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಇರಬೇಕಾಗುತ್ತದೆ.

(10) ರಿಜರ್ವ್ ಬ್ಯಾಂಕ್ ಅಥವಾ ಭಾರತ ಸರ್ಕಾರದಿಂದ ಪೂರ್ವಾನುಮೋದನೆ ಅಗತ್ಯವಿರುವಂತಹ ಯಾವುದೇ ಸಂದರ್ಶನದ ಪ್ರವರ್ಗ ಇರುವುದೇ?

ನೃತ್ಯ ಸಮೂಹಗಳು, ಕಲಾವಿದರು ಇತ್ಯಾದಿಯವರ ಸಂದರ್ಭದಲ್ಲಿ ವಿದೇಶದಲ್ಲಿ ಸಾಂಸ್ಕೃತಿಕ ಪ್ರವಾಸಗಳನ್ನು ಕೈಗೊಳ್ಳಲು ಬಯಸಿದರೆ, ಅವರು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಭಾರತ ಸರ್ಕಾರ ನವದೆಹಲಿ ಇವರಿಂದ ಅವರು ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(11) ವಿದೇಶಿ ಪ್ರವಾಸಕ್ಕಾಗಿ ವಿನಿಮಯವನ್ನು ಖರೀದಿಸುವಾಗ ವಿದೇಶಿ ಕರೆನ್ಸಿ ನೋಟುಗಳಲ್ಲಿ ಎಷ್ಟು ವಿದೇಶಿ ವಿನಿಮಯವನ್ನು ಖರೀದಿಸಬಹುದು?

2000 ಅಮೇರಿಕನ್ ಡಾಲರ್‌ಗಳವರೆಗೆ ಮಾತ್ರ ಕರೆನ್ಸಿ ನೋಟುಗಳನ್ನು/ ನಾಣ್ಯಗಳನ್ನು ಖರೀದಿಸಲು ಪ್ರವಾಸಿಗರಿಗೆ ಅನುಮತಿ ನೀಡಲಾಗಿದೆ. ಉಳಿದ ಮೊಬಲಗನ್ನು ಪ್ರವಾಸಿಗರ ಚೆಕ್ಕು ಅಥವಾ ಬ್ಯಾಂಕರ್ಸ್ ಡ್ರಾಫ್ಟ್ ರೂಪದಲ್ಲಿ ಪಡೆಯಬಹುದು. ಇದಕ್ಕೆ ವಿನಾಯಿತಿಗಳು ಎಂದರೆ; (ಎ) ಇರಾಕ್ ಮತ್ತು ಲಿಬಿಯಾಗಳಿಗೆ ಪ್ರಯಾಣಿಸುವ ಪ್ರವಾಸಿಗರು 5000 ಯುಎಸ್ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊಬಲಗಿಗೆ ಮೀರದ ಕರೆನ್ಸಿ ನೋಟುಗಳನ್ನು ಮತ್ತು ನಾಣ್ಯಗಳನ್ನು ವಿದೇಶಿ ವಿನಿಮಯವಾಗಿ ಪಡೆಯಬಹುದು. (ಬಿ) ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್‌ಗೆ, ರಷಿಯನ್ ಫೆಡರೇಷನ್ ಮತ್ತು ಸ್ವತಂತ್ರ ರಾಷ್ಟ್ರಗಳ ಕಾಮನ್‌ವೆಲ್ತಿನ ಇತರ ರಿಪಬ್ಲಿಕ್ ದೇಶಗಳಿಗೆ ಹೋಗುವ ಪ್ರವಾಸಿಗರು ವಿದೇಶಿ ಕರೆನ್ಸಿ ನೋಟುಗಳು ಅಥವಾ ನಾಣ್ಯಗಳ ರೂಪದಲ್ಲಿ ಬಿಡುಗಡೆ ಮಾಡಿದ ಇಡಿ ವಿದೇಶಿ ವಿನಿಮಯವನ್ನು ಪಡೆಯಬಹುದು.

12. ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗುವ ವ್ಯಕ್ತಿಗಳಿಗೆ ನಿರ್ವಹಣಾ ವೆಚ್ಚಕ್ಕೆ ವಿನಿಮಯವು ಈ ರೀತಿ ಇರುತ್ತದೆ.

(i) ವ್ಯಾಸಂಗಗಳ ಉದ್ದೇಶಕ್ಕಾಗಿ ವಿದೇಶಕ್ಕೆ ಹೋಗುವವರಿಗೆ 2000 ಯುಎಸ್ ಕರೆನ್ಸಿ ನೋಟುಗಳನ್ನು;

(ii) ಉಳಿದ ವಿದೇಶಿ ವಿನಿಮಯವನ್ನು ಪ್ರವಾಸಿಗರ ಚೆಕ್ಕುಗಳು ಅಥವಾ ಓವರ್‌ಸೀಸ್ ಸಂದಾಯ ಮಾಡಬಹುದಾದ ಬ್ಯಾಂಕ್ ಡ್ರಾಫ್ಟ್‌ಗಳ ರೂಪದಲ್ಲಿ ತೆಗೆದುಕೊಳ್ಳಬಹುದು.

(13) ವಿದೇಶಿ ಪ್ರವಾಸಕ್ಕಾಗಿ ಮುಂಗಡವಾಗಿ ಎಷ್ಟು ವಿದೇಶಿ ವಿನಿಮಯವನ್ನು ಖರೀದಿಸಬಹುದು?

ಯಾವುದೇ ಉದ್ದೇಶಕ್ಕಾಗಿ ಆರ್ಜಿಸಲಾದ ವಿದೇಶಿ ವಿನಿಮಯವನ್ನು ಖರೀದಿಸಿದ 60 ದಿವಸಗಳೊಳಗಾಗಿ ಉಪಯೋಗಿಸತಕ್ಕದ್ದು. ಒಂದು ವೇಳೆ 60 ದಿವಸಗಳ ಅವಧಿಯೊಳಗಾಗಿ ವಿದೇಶಿ ವಿನಿಮಯವನ್ನು ಉಪಯೋಗಿಸಲು ಸಾಧ್ಯವಾಗದಿದ್ದರೆ, ಅದನ್ನು ಅಧಿಕೃತ ಡೀಲರ್‌ಗೆ ಒಪ್ಪಿಸಬೇಕು.

(14) ವಿದೇಶಿ ಪ್ರವಾಸಕ್ಕಾಗಿ ಖರೀದಿಸಲಾದ ವಿದೇಶಿ ವಿನಿಮಯಕ್ಕೆ ಸಮಾನವಾದ ಪೂರ್ಣ ರೂಪಾಯಿಯನ್ನು ನಗದು ಮೂಲಕ ವ್ಯಕ್ತಿಯು ಸಂದಾಯ ಮಾಡಬಹುದೇ?

ವಿದೇಶಿ ಪ್ರವಾಸಕ್ಕಾಗಿ ವಿದೇಶಿ ವಿನಿಮಯವನ್ನು ಬ್ಯಾಂಕುಗಳಿಂದ 50,000/– ರೂಪಾಯಿವರೆಗೆ ನಗದಾಗಿ ರೂಪಾಯಿ ಸಂದಾಯ ಮಾಡಿ ಖರೀದಿಸಬಹುದಾಗಿದೆ. ಆದಾಗ್ಯೂ, ರೂಪಾಯಿಯ ಸಮಾನ ಮೊಬಲಗು 50,000 ರೂಪಾಯಿಗಳನ್ನು ಮೀರಿದರೆ ಪೂರ್ಣ ಸಂದಾಯವನ್ನು ಕ್ರಾಸ್ ಮಾಡಿದ ಚೆಕ್ಕು/ ಬ್ಯಾಂಕರ್ ಚೆಕ್ಕು/ ಪಾವತಿ ಆದೇಶ/ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮಾಡತಕ್ಕದ್ದು.

(15) ಭಾರತಕ್ಕೆ ಹಿಂತಿರುಗಿದ ಪ್ರವಾಸಿಗನಿಗೆ ವಿದೇಶಿ ವಿನಿಮಯವನ್ನು ಒಪ್ಪಿಸಲು ಯಾವುದೇ ಕಾಲಮಿತಿ ಇದೆಯೆ?

ವಿದೇಶಿ ಪ್ರವಾಸದಿಂದ ಹಿಂತಿರುಗಿದ ಮೇಲೆ ಆ ಪ್ರವಾಸಿಗರು ಕರೆನ್ಸಿ ನೋಟುಗಳ ರೂಪದಲ್ಲಿ ಹೊಂದಿದ ಖರ್ಚು ಆಗದೆ ಉಳಿದಿರುವ ವಿದೇಶಿ ವಿನಿಮಯವನ್ನು 90 ದಿವಸಗಳ ಒಳಗಾಗಿ ಮತ್ತು ಪ್ರಯಾಣಿಕರ ಚೆಕ್ಕುಗಳನ್ನು 180 ದಿವಸಗಳೊಳಗಾಗಿ ಒಪ್ಪಿಸಬೇಕಾಗುತ್ತದೆ. ಆದಾಗ್ಯೂ, 2000 ರೂಪಾಯಿ ಅಮೇರಿಕನ್ ಡಾಲರ್‌ವರೆಗೆ ವಿದೇಶಿ ವಿನಿಮಯವನ್ನು ಯಾವುದೇ ಮಿತಿಯಿಲ್ಲದೆ ವಿದೇಶಿ ಕರೆನ್ಸಿ ನೋಟುಗಳ ರೂಪದಲ್ಲಿ ಅಥವಾ ಮುಂದಿನ ಉಪಯೋಗಕ್ಕಾಗಿ ಟಿಸಿಗಳು ಅಥವಾ ತಮ್ಮ ಆರ್‌ಎಫ್‌ಸಿ (ಗೃಹ) ಖಾತೆಗೆ ಜಮೆಮಾಡಲು ಇಟ್ಟುಕೊಳ್ಳಲು ಅವರಿಗೆ ಸ್ವಾತಂತ್ರ್ಯವಿದೆ.

(16) ಭಾರತಕ್ಕೆ ಮರಳಿದ ಮೇಲೆ ವಿದೇಶಿ ವಿನಿಮಯವನ್ನು ಇಟ್ಟುಕೊಳ್ಳಬಹುದೇ?

2000 ರೂಪಾಯಿ ಅಮೇರಿಕನ್ ಡಾಲರ್‌ವರೆಗೆ ಅಥವಾ ಅದರ ಸಮಾನ ಮೊತ್ತಕ್ಕೆ ವಿದೇಶಿ ಕರೆನ್ಸಿಯನ್ನು ಹೊಂದಲು ಅಥವಾ ಯಾವುದೇ ಮಿತಿಯಿಲ್ಲದೆ ತಮ್ಮ ಆರ್‌ಎಫ್‌ಸಿ (ಗೃಹ) ಖಾತೆಗೆ ಜಮೆ ಮಾಡಲು ನಿವಾಸಿಗಳಿಗೆ ಅನುಮತಿಸಲಾಗಿದೆ. ಆದರೆ ವಿದೇಶಿ ವಿನಿಮಯವನ್ನು ಅವನೇ ಹೊಂದಿರಬೇಕು.

(ಎ) ವಿದೇಶಕ್ಕೆ ಹೋಗಿರುವಾಗ ಭಾರತದಲ್ಲಿ ಯಾವುದೇ ವ್ಯವಹಾರದಿಂದ ಅಥವಾ ಮಾಡಿದ ಯಾವುದೇ ವಿಷಯದಿಂದ ಉದ್ಭವಿಸಿರದ ಸೇವೆಗಳಿಗಾಗಿ ಸಂದಾಯವೆಂಬಂತೆ;

ಅಥವಾ (ಬಿ) ಸಲ್ಲಿಸಿದ ಸೇವೆಗಳಿಗಾಗಿ ಭಾರತದಲ್ಲಿ ನಿವಾಸಿಯಾಗಿರದ ಮತ್ತು ಭಾರತಕ್ಕೆ ಭೇಟಿ ನೀಡಿರುವ ಯಾವನೇ ವ್ಯಕ್ತಿಯಿಂದ ಯಾವುದೇ ಕಾನೂನುಬದ್ಧ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಸ್ವೀಕರಿಸಿದ ಗೌರವಧನ ಅಥವಾ ಕಾಣಿಕೆ.

(ಸಿ) ಭಾರತದ ಹೊರಗಡೆ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಸ್ವೀಕರಿಸಿದ ಗೌರವಧನ ಅಥವಾ ಕಾಣಿಕೆ; ಅಥವಾ

(ಡಿ) ವಿದೇಶದಲ್ಲಿ ಪ್ರವಾಸ ಮಾಡುವುದಕ್ಕಾಗಿ ಅಧಿಕೃತ ವ್ಯಕ್ತಿಯಿಂದ ಮತ್ತು ಆತನಿಂದ ಖರ್ಚಾಗದ ಮೊಬಲಗು.

(17) ಅಧಿಕೃತ ಡೀಲರ್‌ನಿಗೆ ವಿದೇಶಿ ನಾಣ್ಯಗಳನ್ನು ಒಪ್ಪಿಸುವ ಅಗತ್ಯವಿದೆಯೆ?

ವಿದೇಶಿ ನಾಣ್ಯಗಳನ್ನು ಹೊಂದಲು ನಿವಾಸಿಗಳಿಗೆ ಯಾವುದೇ ನಿರ್ಬಂಧವಿರುವುದಿಲ್ಲ.

(18) ಭಾರತದ ಹೊರಗಡೆಯಿರುವ ನಿವಾಸಿ ವ್ಯಕ್ತಿಗೆ ಎಷ್ಟು ವಿದೇಶಿ ವಿನಿಮಯವನ್ನು ಕಾಣಿಕೆ/ ದಾನ ಎಂದು ಕಳುಹಿಸಬಹುದು?

ಭಾರತದಲ್ಲಿರುವ ಯಾವನೇ ನಿವಾಸಿ ವ್ಯಕ್ತಿಯು ಭಾರತದ ಹೊರಗಡೆ ವಾಸಿಸುವ ವ್ಯಕ್ತಿಗೆ ಕಾಣಿಕೆಯೆಂದು ಅಥವಾ ಭಾರತದ ಹೊರಗಡೆ ಧರ್ಮಾದಾಯ/ ಶೈಕ್ಷಣಿಕ/ ಧಾರ್ಮಿಕ/ ಸಾಂಸ್ಕೃತಿಕ ಸಂಘಟನೆಗೆ ದಾನವೆಂದು ಯಾವುದೇ ಒಂದು ವರ್ಷದಲ್ಲಿ ಐದು ಸಾವಿರ ಅಮೇರಿಕನ್ ಡಾಲರ್‌ವರೆಗೆ ಹಣ ರವಾನೆ ಮಾಡಬಹುದು. ಈ ಮಿತಿಯನ್ನು ಮೀರುವ ಪಾವತಿಗಳಿಗೆ ರಿಜರ್ವ್ ಬ್ಯಾಂಕಿನಿಂದ ಪೂರ್ವಾನುಮತಿಯನ್ನು ಪಡೆಯುವುದು ಅಗತ್ಯವಾಗಿದೆ.

(19) ವಿದೇಶಿ ವಿನಿಮಯ ವ್ಯವಹಾರಗಳನ್ನು ಕೈಗೊಳ್ಳುವುದಕ್ಕಾಗಿ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳನ್ನು (ಐಸಿಸಿ) ಉಪಯೋಗಿಸಲು ವ್ಯಕ್ತಿಗೆ ಅನುಮತಿಸಲಾಗುವುದೇ?

ಅಂತರ್ ರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು (ಐಸಿಸಿ)/ ಎಟಿಎಂ/ ಡೆಬಿಟ್ ಕಾರ್ಡುಗಳ ಉಪಯೋಗವನ್ನು ವಿದೇಶಿ ಪತ್ರಕರ್ತರಿಗೆ, ಇಂಟರ್‌ನೆಟ್ ವಂತಿಗೆ ಇತ್ಯಾದಿಗಳಿಗೆ ಮತ್ತು ಹಲವಾರು ಉದ್ದೇಶಗಳಿಗೆ ಸಂಬಂಧಿಸಿದಂತೆ ವಿದೇಶದಲ್ಲಿ ಪ್ರವಾಸ ಮಾಡಲು ಇತ್ಯಾದಿಗಳಂಥ ವೈಯಕ್ತಿಕ ಸಂದಾಯಗಳನ್ನು ಮಾಡುವುದಕ್ಕೆ ಮಾಡಿಕೊಳ್ಳಬಹುದಾಗಿದೆ. ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು (ಐಸಿಸಿ) ಇವುಗಳ ಮೇಲೆ ನಿಮ್ಮ ವಿದೇಶಿ ವಿನಿಮಯದ ಹಕ್ಕನ್ನು, ಕಾರ್ಡನ್ನು ನೀಡುವ ಪ್ರಾಧಿಕಾರಿಯು ಮಾತ್ರ ನಿಗದಿಪಡಿಸಿದ ಕ್ರೆಡಿಟ್ ಮಿತಿಯ ಮೂಲಕ ಮಿತಿಗೊಳಿಸಲಾಗಿದೆ. ಐಸಿಸಿಯೊಂದಿಗೆ ನೀವು (i) ವಿದೇಶದಲ್ಲಿರುವಾಗ ವೆಚ್ಚಗಳನ್ನು ಪೂರೈಸಬಹುದು/ ಖರೀದಿಗಳನ್ನು ಮಾಡಬಹುದು. (ii) ಭಾರತದಲ್ಲಿ ಇಂಟರ್‌ನೆಟ್ ಮೂಲಕ ಪುಸ್ತಕಗಳ ಮತ್ತು ಇತರ ಬಾಬುಗಳ ಖರೀದಿಗಾಗಿ ವಿದೇಶಿ ವಿನಿಮಯದಲ್ಲಿ ಸಂದಾಯಗಳನ್ನು ಮಾಡಬಹುದು. ನೀವು ಭಾರತದಲ್ಲಿ ಅಥವಾ ಓವರ್‌ಸೀಸ್ ಬ್ಯಾಂಕಿನೊಂದಿಗೆ ವಿದೇಶಿ ಕರೆನ್ಸಿ ಖಾತೆಯನ್ನು ಹೊಂದಿದ್ದರೆ, ನೀವು ಓವರ್‌ಸೀಸ್ ಬ್ಯಾಂಕ್‌ಗಳ ಮತ್ತು ಖ್ಯಾತ ಏಜೆನ್ಸಿಗಳ ಐಸಿಸಿಯನ್ನು ಕೂಡ ಪಡೆಯಬಹುದು.

ನೇಪಾಳ ಮತ್ತು ಭೂತಾನದಲ್ಲಿ ವಿದೇಶಿ ವಿನಿಯಮದಲ್ಲಿ ಸಂದಾಯ ಮಾಡಲು ಈ ಲಿಖಿತಗಳನ್ನು ಉಪಯೋಗಿಸುವುದನ್ನು ಅನುಮತಿಸಲಾಗುವುದಿಲ್ಲ.

(20) ಭಾರತಕ್ಕೆ ಬರುವಾಗ ಎಷ್ಟು ಭಾರತೀಯ ಕರೆನ್ಸಿಯನ್ನು ತರಬಹುದು?

ವಿದೇಶದಿಂದ ಭಾರತಕ್ಕೆ ಬರುವ ವ್ಯಕ್ತಿಯು ಕೆಳಗೆ ಕೊಡಲಾದ ಮಿತಿಯೊಳಗೆ ಭಾರತೀಯ ಕರೆನ್ಸಿ ನೋಟುಗಳನ್ನು ತನ್ನೊಂದಿಗೆ ತರಬಹುದು.

(ಎ) ನೇಪಾಳ ಅಥವಾ ಭೂತಾನವನ್ನು ಹೊರತುಪಡಿಸಿ ಯಾವುದೇ ದೇಶದಿಂದ 5000 ರೂಪಾಯಿಗಳವರೆಗೆ ಮತ್ತು

(ಬಿ) ನೇಪಾಳ ಅಥವಾ ಭೂತಾನದಿಂದ 100 ರೂಪಾಯಿಗಳನ್ನು ಮೀರದ ವರ್ಗದಲ್ಲಿ ಯಾವುದೇ ಮೊಬಲಗು.

(21) ವಿದೇಶಕ್ಕೆ ಹೋಗುವಾಗ ಒಬ್ಬ ವ್ಯಕ್ತಿಯು ನಗದಾಗಿ ಎಷ್ಟು ವಿದೇಶಿ ವಿನಿಮಯವನ್ನು ತೆಗೆದುಕೊಂಡು ಹೋಗಬಹುದು?

ನಿಯಮಗಳಿಗನುಸಾರವಾಗಿ ಒಬ್ಬ ಅಧಿಕೃತ ಡೀಲರ್‌ನಿಂದ ಅಥವಾ ಹಣ ಬದಲಾವಣೆಗಾರನಿಂದ ಖರೀದಿಸಿದ ವಿದೇಶಿ ವಿನಿಮಯವನ್ನು ಒಯ್ಯಲು ನಿವಾಸಿಗಳಿಗೆ ಮುಕ್ತ ಅವಕಾಶವಿದೆ. ಆದಾಗ್ಯೂ, 2000 ಅಮೇರಿಕನ್ ಡಾಲರ್‌ವರೆಗೆ ಕರೆನ್ಸಿ ನೋಟುಗಳು/ ನಾಣ್ಯಗಳ ರೂಪದಲ್ಲಿ ಅಥವಾ ಅದಕ್ಕೆ ಸಮಾನವಾದ ಮೊಬಲಗನ್ನು ವಿದೇಶಿ ವಿನಿಮಯವನ್ನು ಒಯ್ಯಲು ಅವರಿಗೆ ಅನುಮತಿಸಲಾಗಿದೆ. ಉಳಿದ ಮೊಬಲಗನ್ನು ಟ್ರಾವಲರ್ಸ್ ಚೆಕ್ ಅಥವಾ ಬ್ಯಾಂಕರ್ ಡ್ರಾಫ್ಟಿನ ರೂಪದಲ್ಲಿ ಒಯ್ಯಬಹುದು. (ಈ ಸಂಬಂಧದಲ್ಲಿ ದಯವಿಟ್ಟು ಬಾಬು ಸಂಖ್ಯೆ 11ನ್ನು ನೋಡಿ).

(22) ಭಾರತದೊಳಗೆ ಬರುವಾಗ ಎಷ್ಟು ವಿದೇಶಿ ವಿನಿಮಯವನ್ನು ತರಬಹುದು?

ವಿದೇಶದಿಂದ ಭಾರತಕ್ಕೆ ಬರುವ ವ್ಯಕ್ತಿಯು ಯಾವುದೇ ಮಿತಿಯಿಲ್ಲದೆ ಅವನೊಂದಿಗೆ ವಿದೇಶಿ ವಿನಿಮಯವನ್ನು ತರಬಹುದು. ಆದಾಗ್ಯೂ, ಕರೆನ್ಸಿ ನೋಟುಗಳು, ಬ್ಯಾಂಕ್ ನೋಟುಗಳು ಅಥವಾ ಟ್ರಾವಲರ್ಸ್ ಚೆಕ್ಕುಗಳ ರೂಪದಲ್ಲಿ ತಂದ ವಿದೇಶಿ ವಿನಿಮಯದ ಒಟ್ಟು ಮೌಲ್ಯವು, 10,000 ಅಮೇರಿಕನ್ ಡಾಲರ್ ಅಥವಾ ಅದರ ಸಮಾನ ಮೊಬಲಗನ್ನು ಮೀರಿ ಮತ್ತು ಅಥವಾ ವಿದೇಶಿ ಕರೆನ್ಸಿಯ ಮೌಲ್ಯವು ಐದು ಸಾವಿರ ಅಮೇರಿಕನ್ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊಬಲಗನ್ನು ಮೀರಿದರೆ ಭಾರತಕ್ಕೆ ಅವನು ಬಂದ ಮೇಲೆ ಕರೆನ್ಸಿ ಘೋಷಣಾ ನಮೂನೆಯಲ್ಲಿ (ಸಿಡಿಎಫ್) ವಿಮಾನ ನಿಲ್ದಾಣದಲ್ಲಿ ಸೀಮಾಶುಲ್ಕದ ಅಧಿಕಾರಿಗಳಿಗೆ ಘೋಷಣೆ ಮಾಡತಕ್ಕದ್ದು.

(23) ಕಾಣಿಕೆ ಪಾರ್ಸಲ್‌ನ್ನು ಭಾರತದ ಹೊರಗಡೆ ಕಳುಹಿಸಿದಾಗ ಸಂಪೂರ್ಣ ರಫ್ತು ಕಾರ್ಯವಿಧಾನವನ್ನು ವ್ಯಕ್ತಿಯು ಅನುಸರಿಸಬೇಕೆ?

ಭಾರತದಲ್ಲಿನ ನಿವಾಸಿ ವ್ಯಕ್ತಿಯು 500000 ರೂಪಾಯಿಗಳನ್ನು ಮೀರದ ಕಾಣಿಕೆ ವಸ್ತುವನ್ನು ಕಳುಹಿಸಲು (ರಫ್ತು) ಸ್ವಾತಂತ್ರ್ಯವಿದೆ. ಆದರೆ, ಆ ವಸ್ತುವನ್ನು ರಫ್ತು ಮಾಡಿರುವುದು ವಿದೇಶಿ ವ್ಯಾಪಾರ ನೀತಿಯ ಅಡಿಯಲ್ಲಿ ನಿಷೇಧಿತವಾಗಿರಬಾರದು.

(24) ವಿದೇಶಕ್ಕೆ ಹೋಗುವಾಗ ಎಷ್ಟು ಆಭರಣಗಳನ್ನು ಒಯ್ಯಬಹುದು?

ವೈಯಕ್ತಿಕ ಆಭರಣಗಳನ್ನು ಭಾರತದ ಹೊರಗಡೆ ಒಯ್ಯುವುದನ್ನು ಭಾರತ ಸರ್ಕಾರವು ವಿದೇಶಿ ವ್ಯಾಪಾರ ನೀತಿಯ ಅಡಿಯಲ್ಲಿ ರೂಪಿಸಿದ ಬ್ಯಾಗೇಜ್ ನಿಯಮಗಳ ಮೂಲಕ ನಿಯಂತ್ರಿತವಾಗುತ್ತದೆ. ಈ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿನ ಯಾವುದೇ ಅನುಮೋದನೆಯನ್ನು ಪಡೆಯಬೇಕಾಗಿಲ್ಲ.

(25) ನಿವಾಸಿಯಲ್ಲದವನಿಗೆ ಸ್ಥಳೀಯ ಆದರಾತಿಥ್ಯವನ್ನು ನೀಡಬಹುದೇ?

ಭಾರತಕ್ಕೆ ಭೇಟಿ ನೀಡಿರುವ ಭಾರತದ ಹೊರಗಿನ ನಿವಾಸಿ ವ್ಯಕ್ತಿಗೆ ಊಟ, ವಸತಿ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳು ಅಥವಾ ಭಾರತದ ಒಳಗೆ ಪ್ರಯಾಣಿಸಲು ಭಾರತದಿಂದ ಪ್ರಯಾಣಿಸಲು ಮತ್ತು ಭಾರತದೊಳಗೆ ಪ್ರವಾಸ ಮಾಡಲು ತಗಲುವ ವೆಚ್ಚಗಳನ್ನು ಭರಿಸುವುದಕ್ಕಾಗಿ ಭಾರತೀಯ ರೂಪಾಯಿಗಳಲ್ಲಿ ಯಾವುದೇ ಸಂದಾಯವನ್ನು ಮಾಡಲು ಭಾರತದಲ್ಲಿ ವಾಸಿಯಾಗಿರುವ ವ್ಯಕ್ತಿಯು ಸ್ವಾತಂತ್ರ್ಯ ಹೊಂದಿದ್ದಾನೆ.

(26) ಭಾರತದಲ್ಲಿ ಪ್ರವಾಸ ಮಾಡದ ಅವರ ಪ್ರಯಾಣಕ್ಕಾಗಿ ನಿವಾಸಿಗಳು ಭಾರತದಲ್ಲಿ ವಿಮಾನದ ಟಿಕೇಟುಗಳನ್ನು ಖರೀದಿಸಬಹುದೇ?

ನಿವಾಸಿಗಳು ಯಾವುದೇ ಮೂರನೇ ದೇಶಕ್ಕೆ ಭೇಟಿ ನೀಡುವುದಕ್ಕಾಗಿ ಭಾರತದಲ್ಲಿ ತಮ್ಮ ಟಿಕೇಟುಗಳನ್ನು ಖರೀದಿಸಬಹುದು. ಎಂದರೆ, ನಿವಾಸಿಗಳು ಪ್ರವಾಸಕ್ಕಾಗಿ ತಮ್ಮ ಟಿಕೇಟುಗಳನ್ನು ಕಾಯ್ದಿರಿಸಬಹುದು. ಉದಾಹರಣೆಗೆ:

ಭಾರತದಲ್ಲಿರುವ ಸ್ವದೇಶಿ/ ವಿದೇಶಿ ಏರ್‌ಲೈನ್ಸ್‌ಗಳ ಮೂಲಕ ಲಂಡನ್ನಿನ್ನಿಂದ ನ್ಯೂಯಾರ್ಕ್‌ಗೆ ಟಿಕೇಟುಗಳನ್ನು ಖರೀದಿಸಬಹುದು.

(27) ನಿವಾಸಿಯು ಭಾರತದಲ್ಲಿ ವಿದೇಶಿ ಕರೆನ್ಸಿ ಡಾಮಿನೇಟೆಡ್ ಖಾತೆಯನ್ನು ತೆರೆಯಬಹುದೇ?

ಭಾರತದಲ್ಲಿರುವ ನಿವಾಸಿ ವ್ಯಕ್ತಿಗಳು, ಈ ಕೆಳಕಂಡ ಎರಡು ಯೋಜನೆಗಳ ಮೇರೆಗೆ ಭಾರತದಲ್ಲಿ ವಿದೇಶಿ ಕರೆನ್ಸಿ ಖಾತೆಗಳನ್ನು ಇಟ್ಟುಕೊಂಡು ಬರಲು ಅನುಮತಿಸಲಾಗಿದೆ.

(ಎ) ಇಇಎಫ್‌ಸಿ ಖಾತೆಗಳು:– ವಿದೇಶಿ ಕರೆನ್ಸಿ ಖಾತೆ ಎಂದರೆ, ಇಇಎಫ್‌ಸಿ ಖಾತೆಯಲ್ಲಿ ವಿದೇಶದಿಂದ ಸ್ವೀಕರಿಸಿದ ಶೇಕಡ 50ರ ವರೆಗೆ ವಿದೇಶಿ ಕರೆನ್ಸಿ ರವಾನೆಯನ್ನು ಭಾರತದಲ್ಲಿನ ಅಧಿಕೃತ ಡೀಲರ್‌ನೊಂದಿಗೆ ನಿವಾಸಿಗಳು ಇಟ್ಟುಕೊಳ್ಳಬಹುದು. ಇಇಎಫ್‌ಸಿ ಖಾತೆಗಳಲ್ಲಿ ಹೊಂದಿರುವ ನಿಧಿಗಳನ್ನು ಸರ್ಕಾರ/ ಆರ್‌ಬಿಐ ಕಾಲಕಾಲಕ್ಕೆ ಹೊರಡಿಸಿದ ನಿಯಮಗಳು/ ನಿಯಂತ್ರಣಗಳು/ ಅಧಿಸೂಚನೆಗಳು/ ನಿರ್ದೇಶನಗಳ ಮೂಲಕ ನಿರ್ದಿಷ್ಟಪಡಿಸಲಾದಂತೆ ಚಾಲ್ತಿಖಾತೆ ವ್ಯವಹಾರಗಳಿಗೆ ಮತ್ತು ಅನುಮೋದಿತ ಬಂಡವಾಳ ಖಾತೆಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

(ಬಿ) ಆರ್‌ಎಫ್‌ಸಿ ಖಾತೆಗಳು:– ಹಿಂತಿರುಗುವ ಭಾರತೀಯರು ಎಂದರೆ, ಈ ಮುಂಚೆ ಅನಿವಾಸಿಗಳಾಗಿದ್ದ ಭಾರತೀಯರು ಮತ್ತು ಈಗ ಕಾಯಂ ವಾಸ್ತವ್ಯಕ್ಕಾಗಿ ಹಿಂತಿರುಗುವ ಭಾರತೀಯರು ತಮ್ಮ ವಿದೇಶಿ ಕರೆನ್ಸಿ ಆಸ್ತಿಗಳನ್ನು ಇಟ್ಟುಕೊಳ್ಳಲು, ನಿವಾಸಿ ವಿದೇಶಿ ಕರೆನ್ಸಿ (ಆರ್‌ಎಫ್‌ಸಿ) ಖಾತೆಯನ್ನು ಭಾರತದಲ್ಲಿನ ಅಧಿಕೃತ ಡೀಲರ್‌ನೊಂದಿಗೆ ತೆರೆಯಲು, ಹೊಂದಲು ಮತ್ತು ಇಟ್ಟುಕೊಳ್ಳಲು ಅನುಮತಿಸಲಾಗಿದೆ. ಹಿಂತಿರುಗುವ ಸಮಯದಲ್ಲಿ ಭಾರತದ ಹೊರಗೆ ಹೊಂದಿದ ಆಸ್ತಿಗಳನ್ನು ಅಂಥ ಖಾತೆಗೆ ಜಮೆ ಮಾಡಬಹುದಾಗಿದೆ. ವಿದೇಶಿ ವಿನಿಮಯ (i) ಎಫ್‌ಇಎಂಎ 1999ರ 6ನೇ ಪ್ರಕರಣದ (4)ನೇ ಉಪಪ್ರಕರಣಕ್ಕೆ ಉಲ್ಲೇಖಿಸಿದ ವ್ಯಕ್ತಿಯಿಂದ ಕಾಣಿಕೆ ಅಥವಾ ವಾರಸು ಆಗಿ ಸ್ವೀಕರಿಸಿದ ಅಥವಾ ಆರ್ಜಿಸಿದ (ii) ಅಧಿನಿಯಮದ 9ನೇ ಪ್ರಕರಣದ ಸಿ ಖಂಡದಲ್ಲಿ ಉಲ್ಲೇಖಿಸಿದ ಅಥವಾ ಅದರಿಂದ ಕಾಣಿಕೆ ಅಥವಾ ವಾರಸು ಆಗಿ ಆರ್ಜಿಸಿರುವುದನ್ನು ಕೂಡಾ ಈ ಖಾತೆಗೆ ಜಮೆ ಮಾಡಬಹುದಾಗಿದೆ.

ಭಾರತದ ಹೊರಗೆ ಹೂಡಿಕೆಯ ಮೇಲಿನ ಯಾವುದೇ ನಿರ್ಬಂಧವು ಒಳಗೊಂಡಂತೆ, ವಿದೇಶಿ ಕರೆನ್ಸಿ ಜಮಾ–ಖರ್ಚು ಪಟ್ಟಿಗಳ ಬಳಕೆಗೆ ಸಂಬಂಧಿಸಿದ ಎಲ್ಲಾ ನಿರ್ಬಂಧಗಳಿಂದ ಆರ್‌ಎಫ್‌ಸಿ ಖಾತೆಯಲ್ಲಿರುವ ನಿಧಿಗಳು ಮುಕ್ತವಾಗಿರುತ್ತವೆ. ನಿವಾಸಿಗಳಿಗೂ ಕೂಡಾ ಈ ಸೌಲಭ್ಯ ಲಭ್ಯವಾಗುತ್ತವೆ. ಆದರೆ, ವಿದೇಶಿ ವಿನಿಮಯವನ್ನು ಅಂಥ ಖಾತೆಗೆ ಜಮೆ ಮಾಡಬೇಕಾಗಿರುವ ವಿನಿಯಮವು ಕೆಲವು ನಿರ್ದಿಷ್ಟ ಬಗೆಯ ನಿಧಿಗಳು/ ಖಾತೆಗಳಿಂದ ಸ್ವೀಕರಿಸಿದವುಗಳಾಗಿರಬೇಕು.

(ಸಿ) ಆರ್‌ಎಫ್‌ಸಿ (ಗೃಹ) ಖಾತೆ:–
ಭಾರತದಲ್ಲಿನ ನಿವಾಸಿ ವ್ಯಕ್ತಿಯು ವಿದೇಶದಲ್ಲಿ ಸಲ್ಲಿಸಿದ ಸೇವೆಗಳಿಗಾಗಿ ಸಂದಾಯ ಸಲ್ಲಿಸಿದ ಸೇವೆಗಳಿಗಾಗಿ ಅಥವಾ ಭಾರತದಲ್ಲಿ ವಾಸಿಸದ ಯಾವನೇ ವ್ಯಕ್ತಿಯಿಂದ ಯಾವುದೇ ಕಾನೂನುಬದ್ಧ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಪಡೆದ ಗೌರವಧನ, ಕಾಣಿಕೆ ಇತ್ಯಾದಿ ಸಂದಾಯಗಳಂತಹ ಯಾವುದೇ ಮೂಲಗಳಿಂದ, ಕರೆನ್ಸಿ ನೋಟುಗಳು, ಬ್ಯಾಂಕ್ ನೋಟುಗಳು ಮತ್ತು ಪ್ರಯಾಣಿಕರ ಚೆಕ್ಕುಗಳ ರೂಪದಲ್ಲಿ ಆರ್ಜಿಸಿದ ವಿದೇಶಿ ವಿನಿಮಯದಿಂದ ನಿವಾಸಿ ವಿದೇಶಿ ಕರೆನ್ಸಿ (ಗೃಹ) ಖಾತೆಯನ್ನು ಭಾರತದಲ್ಲಿನ ಅಧಿಕೃತ ಡೀಲರ್‌ನೊಂದಿಗೆ ತೆರೆಯಬಹುದು, ಧಾರಣ ಮಾಡಬಹುದು ಮತ್ತು ಇಟ್ಟುಕೊಂಡು ಬರಬಹುದು. ಸರಕುಗಳ ಮತ್ತು/ ಅಥವಾ ಸೇವೆಗಳ ರಫ್ತು ಉತ್ಪತ್ತಿಗಳು, ರಾಯಲ್ಟಿ, ಗೌರವ ಧನ, ಉತ್ಪತ್ತಿಗಳಂಥ ಗಳಿಸಿದ ವಿದೇಶಿ ವಿನಿಮಯದಿಂದ ಖಾತೆಗೆ ಜಮೆ ಮಾಡಬಹುದು/ ಮತ್ತು/ ಅಥವಾ ನಿಕಟ ಸಂಬಂಧಿಗಳಿಂದ (ಕಂಪನಿಗಳ ಅಧಿನಿಯಮದಲ್ಲಿ ಪರಿಭಾಷಿಸಿದಂತೆ) ಸ್ವೀಕರಿಸಲಾದ, ಕಾಣಿಕೆಗಳಿಂದ ದಾನಗಳಿಂದ ಒಂದು ಖಾತೆಯನ್ನು ತೆರೆಯಬಹುದು ಮತ್ತು ನಿವಾಸಿ ವ್ಯಕ್ತಿಗಳಿಂದ ಸಾಮಾನ್ಯ ಬ್ಯಾಂಕಿಂಗ್ ಚಾನಲ್‌ಗಳ ಮೂಲಕ ಭಾರತಕ್ಕೆ ವಾಪಸ್ಸು ಕಳಿಸಬಹುದು.

(28) ಭಾರತದಲ್ಲಿನ ನಿವಾಸಿಯಾದ ವ್ಯಕ್ತಿಯು ಭಾರತದ ಹೊರಗಡೆ ಆಸ್ತಿಗಳನ್ನು ಧಾರಣ ಮಾಡಬಹುದೇ?

ವಿದೇಶಿ ವಿನಿಮಯ ವ್ಯವಸ್ಥಾಪನೆ ಅಧಿನಿಯಮ 1999ರ 6ನೇ ಪ್ರಕರಣದ 4ನೇ ಉಪಪ್ರಕರಣದ ಅನುಸಾರ ಭಾರತದಲ್ಲಿನ ನಿವಾಸಿ ವ್ಯಕ್ತಿಯು, ಅಂಥ ಕರೆನ್ಸಿ, ಭದ್ರತಾ ಪತ್ರ ಅಥವಾ ಸ್ಥಿರ ಸ್ವತ್ತನ್ನು ಅಂಥ ವ್ಯಕ್ತಿಯು ಭಾರತದ ಹೊರಗಡೆ ನಿವಾಸಿಯಾಗಿದ್ದಾಗ ಹೊಂದಿದ್ದರೆ, ಧಾರಣ ಮಾಡಿದ್ದರೆ ಅಥವಾ ಒಡೆತನ ಹೊಂದಿದ್ದರೆ, ಅಥವಾ ಭಾರತದ ಹೊರಗಡೆ ನಿವಾಸಿಯಾಗಿದ್ದ ವ್ಯಕ್ತಿಯಿಂದ ವಾರಸು ಮೂಲಕ ಪಡೆದಿದ್ದರೆ (ಕೆಳಗೆ ಚರ್ಚಿಸಿದ 25000 ರೂಪಾಯಿಗಳ ಅಮೇರಿಕನ್ ಡಾಲರಿನ ಉದಾರೀಕೃತ ಪಾವತಿ ಸೌಲಭ್ಯಕ್ಕೆ ಉಲ್ಲೇಖಿಸುವುದು) ಭಾರತದಲ್ಲಿ ನಿವಾಸಿಯಾಗಿರುವ ವ್ಯಕ್ತಿಯು ವಿದೇಶಿ ಕರೆನ್ಸಿ, ವಿದೇಶಿ ಭದ್ರತಾ ಪತ್ರ ಅಥವಾ ಯಾವುದೇ ಸ್ಥಿರ ಸ್ವತ್ತನ್ನು ಧಾರಣ ಮಾಡಲು, ಒಡೆತನ ಹೊಂದಲು, ವರ್ಗಾವಣೆ ಮಾಡಲು ಮುಕ್ತ ಅವಕಾಶವಿರುತ್ತದೆ.

II. 25,000 ಅಮೇರಿಕನ್ ಡಾಲರ್‌ನ ಉದಾರೀಕೃತ ಹಣ ರವಾನೆ ಯೋಜನೆ

(29) 25,000 ಅಮೇರಿಕನ್ ಡಾಲರ್‌ನ ಉದಾರೀಕೃತ ಹಣ ರವಾನೆ ಯೋಜನೆ ಎಂದರೇನು?

ಈ ಹೊಸ ಸೌಲಭ್ಯವನ್ನು ಎಲ್ಲಾ ನಿವಾಸಿ ವ್ಯಕ್ತಿಗಳಿಗೆ ವಿಸ್ತರಿಸಲಾಗಿದೆ. ಇದರ ಮೇರೆಗೆ ವ್ಯವಹಾರದ ಯಾವುದೇ ಅನುಮತೀಯ ಚಾಲ್ತಿ ಅಥವಾ ಬಂಡವಾಳ ಖಾತೆಗೆ ಅಥವಾ ಅವೆರಡರ ಸಂಯೋಜನೆಗೆ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 25,000 ಅಮೇರಿಕನ್ ಡಾಲರ್‌ವರೆಗೆ ಅವರು ಮುಕ್ತವಾಗಿ ಹಣ ರವಾನೆ ಮಾಡಬಹುದು.

(30) ಈ ಉದಾರೀಕೃತ ಪಾವತಿ ಸೌಲಭ್ಯವನ್ನು ಪಡೆಯಲು ಯಾರು ಅರ್ಹರಾಗಿರುತ್ತಾರೆ?

ಈ ಸೌಲಭ್ಯವು ನಿವಾಸಿ ವ್ಯಕ್ತಿಗಳಿಗೆ ಮಾತ್ರ ಲಭ್ಯವಿರುತ್ತದೆ.

(31) ಆಗಿಂದಾಗ ಪಾವತಿ ಮಾಡಬಹುದೇ?

ನಿವಾಸಿ ವ್ಯಕ್ತಿಗಳು ಈ ಯೋಜನೆಯ ಅಡಿಯಲ್ಲಿ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ಹಣ ರವಾನೆ ಸೌಲಭ್ಯವನ್ನು ಪಡೆಯಬಹುದಾಗಿದೆ.

(32) ಯಾವ ಉದ್ದೇಶಗಳಿಗಾಗಿ ಈ ಯೋಜನೆ ಅಡಿಯಲ್ಲಿ ರವಾನೆಗಳನ್ನು ಮಾಡಬಹುದು?

ಈ ಸೌಲಭ್ಯವು ಯಾವುದೇ ಅನುಮತೀಯ ಚಾಲ್ತಿ ಅಥವಾ ಬಂಡವಾಳ ಖಾತೆಯ ವ್ಯವಹಾರಕ್ಕಾಗಿ ಅಥವಾ ಅವೆರಡರ ಸಂಯೋಜನೆಗಾಗಿ ರವಾನೆ/ಗಳನ್ನು ಮಾಡುವುದಕ್ಕಾಗಿ ಲಭ್ಯವಿರುತ್ತದೆ. ವಿದೇಶಿ ವಿನಿಮಯ ವ್ಯವಸ್ಥಾಪನೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು 2000ದ (ಅನುಸೂಚಿ –2ರ) ಭಾರತ ಸರ್ಕಾರದಿಂದ ನಿರ್ದಿಷ್ಟವಾಗಿ ನಿಷೇಧಿತವಾದ (ಅನುಸೂಚಿ –1) ಅಥವಾ ನಿಯಂತ್ರಿತವಾದ ಉದ್ದೇಶಗಳಿಗಾಗಿ ಲಭ್ಯವಾಗುವುದಿಲ್ಲ.

(33) ನಿವಾಸಿಗಳು ವಿದೇಶದಲ್ಲಿ ಸ್ಥಿರ ಸ್ವತ್ತನ್ನು ಅಥವಾ ಇತರ ಆಸ್ತಿಗಳನ್ನು ಆರ್ಜಿಸಲು ಈ ಸೌಲಭ್ಯವನ್ನು ಪಡೆಯಬಹುದೇ?

ಹೌದು. ಆರ್‌ಬಿಐನ ಪೂರ್ವಾನುಮೋದನೆ ಇಲ್ಲದೆ ಭಾರತದ ಹೊರಗಡೆಯಿರುವ ಸ್ಥಿರ ಸ್ವತ್ತು, ಷೇರುಗಳು ಅಥವಾ ಯಾವುದೇ ಇತರ ಆಸ್ತಿಯನ್ನು ಆರ್ಜಿಸಲು ಮತ್ತು ಧಾರಣ ಮಾಡಲು ಈ ಯೋಜನೆಯನ್ನು ಬಳಸಿಕೊಳ್ಳಲು ವ್ಯಕ್ತಿಗಳಿಗೆ ಮುಕ್ತ ಅವಕಾಶವಿದೆ.

(34) ಈ ಯೋಜನೆಯ ಮೇರೆಗೆ ವ್ಯಕ್ತಿಗಳು ಪಾವತಿ ಮಾಡಲು ವಿದೇಶದಲ್ಲಿ ವ್ಯಕ್ತಿಗಳು ವಿದೇಶಿ ಕರೆನ್ಸಿ ಖಾತೆಯನ್ನು ತೆರೆಯಬಹುದೇ?

ಹೌದು, ಆರ್.ಬಿ.ಐ.ನ ಪೂರ್ವಾನುಮೋದನೆಯಿಲ್ಲದೆ ಈ ಯೋಜನೆಯ ಮೇರೆಗೆ **ಪಾವತಿಗ**ಳನ್ನು ಮಾಡುವುದಕ್ಕಾಗಿ ಭಾರತದ ಹೊರಗಡೆಯಿರುವ ಬ್ಯಾಂಕಿನಲ್ಲಿ ವಿದೇಶಿ ಕರೆನ್ಸಿ ಖಾತೆಗಳನ್ನು ತೆರೆಯಲು, ಧಾರಣ ಮಾಡಲು ಮತ್ತು ಇಟ್ಟುಕೊಂಡು ಬರಲು ವ್ಯಕ್ತಿಗಳಿಗೆ ಮುಕ್ತ ಅವಕಾಶವಿದೆ. ಈ ಯೋಜನೆಯ ಮೇರೆಗೆ **ಪಾವತಿ**ಗಳಿಗೆ ಸಂಬಂಧಿಸುವ ಅಥವಾ ಉದ್ಭವಿಸುವ ಯಾವುದೇ ವ್ಯವಹಾರದ ಮೂಲಕ ಈ ಖಾತೆಯನ್ನು ಉಪಯೋಗಿಸಬಹುದು.

(35) ವಿದೇಶಿ ವಿನಿಮಯ ವ್ಯವಸ್ಥಾಪನೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ರ 3ನೇ ಅನುಸೂಚಿಯಲ್ಲಿ ಒಳಗೊಂಡ ಖಾಸಗಿ/ ವ್ಯವಹಾರ ಪ್ರವಾಸ, ದಾನ, ಕಾಣಿಕೆ, ವ್ಯಾಸಂಗಗಳು, ವೈದ್ಯಕೀಯ ಚಿಕಿತ್ಸೆ ಇತ್ಯಾದಿಗಳಿಗಾಗಿ ಈಗಿರುವ ಸೌಲಭ್ಯಗಳ ಮೇಲೆ ಯೋಜನೆಯ ಪರಿಣಾಮವೇನು?

ಈ ಯೋಜನೆ ಅಡಿಯಲ್ಲಿನ ಸೌಲಭ್ಯವು ಈಗಾಗಲೇ ವಿದೇಶಿ ವಿನಿಮಯ ವ್ಯವಸ್ಥಾಪನೆ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ರ ಅಡಿಯಲ್ಲಿ ಲಭ್ಯವಾಗಿರುವ ಸೌಲಭ್ಯಗಳ ಜೊತೆಗೆ ಹೆಚ್ಚುವರಿಯಾಗಿರುತ್ತದೆ.

(36) ವ್ಯಕ್ತಿಯು ಯಾವುದೇ ದೇಶಕ್ಕೆ ಯೋಜನೆ ಅಡಿಯಲ್ಲಿ ರವಾನೆಯನ್ನು ಮಾಡಬಹುದೇ?

ಭೂತಾನ್, ನೇಪಾಳ, ಮಾರಿಷಿಯಸ್ ಅಥವಾ ಪಾಕಿಸ್ತಾನಕ್ಕೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರವಾನೆಯನ್ನು ಮಾಡಲಾಗದು. ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ಮೂಲಕ ಕಾಲಕಾಲಕ್ಕೆ ಸಹಕಾರಿಯೇತರ ದೇಶಗಳು ಅಥವಾ ರಾಜ್ಯಕ್ಷೇತ್ರಗಳೆಂದು ಗುರುತಿಸಿದ ದೇಶಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರವಾನೆಗಳನ್ನು ಮಾಡುವುದಕ್ಕೆ ಈ ಸೌಲಭ್ಯವು ಲಭ್ಯವಾಗುವುದಿಲ್ಲ.

ಅಂಥ ದೇಶಗಳ/ ರಾಜ್ಯ ಕ್ಷೇತ್ರಗಳ ಚಾಲ್ತಿ ಪಟ್ಟಿಗಾಗಿ www.fatf-gafi.org. ದಯವಿಟ್ಟು ನೋಡಿ.

ಈ ಸೌಲಭ್ಯದ ಅಡಿಯಲ್ಲಿ ರವಾನೆಗಳನ್ನು ವ್ಯಕ್ತಿಗಳಿಗೆ ಮಾಡಲಾಗುವುದಿಲ್ಲ ಮತ್ತು ಕಾಲಕಾಲಕ್ಕೆ ಆರ್‌ಬಿಐನಿಂದ ಬ್ಯಾಂಕುಗಳಿಗೆ ಸಲಹೆ ನೀಡಲಾದಂತೆ ವಿಶಿಷ್ಟ ಅಪಾಯವನ್ನು ಒಡ್ಡುತ್ತಿರುವ ಅಥವಾ ಭಯೋತ್ಪಾದಕ ಕೃತ್ಯಗಳನ್ನು ಎಸಗುತ್ತಿವೆಯೆಂದು ಗುರುತಿಸಲಾದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಮಾಡಲಾಗದು.

(37) ಹಣ ರವಾನೆ ಮಾಡುವವನು ಪಾಲಿಸಬೇಕಾದ ಅಗತ್ಯತೆಗಳು ಏನು?

ವ್ಯಕ್ತಿಗಳು ಎ.ಡಿ.ಯ ಒಂದು ಶಾಖೆಯನ್ನು ಹೆಸರಿಸತಕ್ಕದ್ದು. ಇದರ ಮೂಲಕ ಈ ಯೋಜನೆಯ ಅಡಿಯಲ್ಲಿನ ಎಲ್ಲಾ ಹಣ ರವಾನೆಗಳನ್ನು ಮಾಡಲಾಗುವುದು. ಪಾವತಿಯ ಉದ್ದೇಶದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಒಂದು ಅರ್ಜಿ ಹಾಗೂ ಘೋಷಣೆಯನ್ನು ಅವನು ಒದಗಿಸಬೇಕು ಮತ್ತು ಅವನಿಗೆ ಸೇರಿದ ನಿಧಿಗಳನ್ನು ಘೋಷಿಸಬೇಕು ಮತ್ತು ಈ ಹಣವನ್ನು ಈ ಯೋಜನೆ ಅಡಿಯಲ್ಲಿ ನಿಷೇಧಿಸಲಾದ ಅಥವಾ ನಿಯಂತ್ರಿಸಲಾದ ಉದ್ದೇಶಗಳಿಗಾಗಿ ಉಪಯೋಗಿಸಲಾಗುವುದಿಲ್ಲ ಎಂದು ಅವನು ಘೋಷಿಸಬೇಕು.

(38) 25,000 ಅಮೇರಿಕನ್ ಡಾಲರ್ ಹೂಡಿಕೆಯು ಒಂದು ವರ್ಷದೊಳಗೆ ಅದರ ಮೌಲ್ಯದಲ್ಲಿ ಹೆಚ್ಚಳ ಉಂಟಾದರೆ ಆ ವ್ಯಕ್ತಿಯು ಆ ಲಾಭಗಳನ್ನು ಪಡೆದು ಪುನಃ ವಿದೇಶದಲ್ಲಿ ಹೂಡಿಕೆ ಮಾಡಬಹುದೇ?

ಹೂಡಿಕೆದಾರನು ವಿದೇಶದಲ್ಲಿ ಲಾಭ ಮತ್ತು ನಷ್ಟವನ್ನು ಪಡೆಯಲು ಮತ್ತು ಪುನಃ ವಿದೇಶದಲ್ಲಿ ಹೂಡಿಕೆ ಮಾಡಲು ಮುಕ್ತ ಅವಕಾಶವಿರುತ್ತದೆ. ಯಾವುದೇ ಹೊಣೆಗಾರಿಕೆಯ ಮೇರೆಗೆ ವಿದೇಶಕ್ಕೆ ಕಳುಹಿಸಿದ ನಿಧಿಗಳನ್ನು ವಾಪಸು ಕಳಿಸುವಂತಿಲ್ಲ.

(39) ಒಬ್ಬ ವ್ಯಕ್ತಿಯು ಕ್ಯಾಲೆಂಡರ್ ವರ್ಷದಲ್ಲಿ ಮೊಬಲಗನ್ನು ಸ್ವದೇಶಕ್ಕೆ ಕಳುಹಿಸಿದಾಗ ಪುನಃ ಆ ಸೌಲಭ್ಯವನ್ನು ಪಡೆಯಬಹುದೇ?

ಕ್ಯಾಲೆಂಡರ್ ವರ್ಷದಲ್ಲಿ 25,000 ಅಮೇರಿಕನ್ ಡಾಲರ್‌ವರೆಗೆ ಮೊಬಲಗಿಗಾಗಿ ಒಮ್ಮೆ ಹಣರವಾನೆ ಮಾಡಿದರೆ, ಹೂಡಿಕೆಗಳ ಉತ್ಪತ್ತಿಗಳನ್ನು ದೇಶದೊಳಗೆ ವಾಪಸ್ಸು ತಂದಾಗ್ಯೂ, ಈ ಮಾರ್ಗದಲ್ಲಿ ಯಾವುದೇ ಹೆಚ್ಚಿನ ರವಾನೆಗಳನ್ನು ಮಾಡಲು ಅರ್ಹನಾಗಿರುವುದಿಲ್ಲ.

(40) ಕೇವಲ ಅಮೇರಿಕನ್ ಡಾಲರ್‌ಗಳಲ್ಲಿ ರವಾನೆಗಳನ್ನು ಮಾಡಬಹುದೆ?

ಕ್ಯಾಲೆಂಡರ್ ವರ್ಷದಲ್ಲಿ ರವಾನೆಗಳು 25,000 ಅಮೇರಿಕನ್ ಡಾಲರ್‌ಗೆ ಸಮನಾದ ಯಾವುದೇ ಕರೆನ್ಸಿಯಲ್ಲಿ ಇರಬಹುದು.

(41) ಕಳೆದ ವರ್ಷ ಪಟ್ಟಿ ಮಾಡಿದ ಭಾರತೀಯ ಫರ್ಮುಗಳಲ್ಲಿ ಕೊನೇಪಕ್ಷ ಶೇಕಡ 10ನ್ನು ಹೊಂದಿದ ಓವರ್ ಸೀಸ್ ಪಟ್ಟಿ ಮಾಡಿದ ಫರ್ಮ್‌ಗಳ ಈಕ್ವಿಟಿಗಳಲ್ಲಿ ನಿವಾಸಿ ಹೂಡಿಕೆದಾರರು ಹೂಡಿಕೆ ಮಾಡಬಹುದಾಗಿತ್ತು. ಈ ಷರತ್ತು ಈಗಲೂ ಅನ್ವಯವಾಗುತ್ತದೆಯೇ?

ಪಟ್ಟಿ ಮಾಡಿದ ಭಾರತೀಯ ಫರ್ಮ್‌ಗಳಲ್ಲಿ ಕೊನೇಪಕ್ಷ ಶೇಕಡ 10ನ್ನು ಹೊಂದಿರುವ ಓವರ್‌ಸೀಸ್ ಪಟ್ಟಿ ಮಾಡಿದ ಫರ್ಮ್‌ಗಳ ಈಕ್ವಿಟಿಗಳಲ್ಲಿ ಹೂಡಿಕೆದಾರರು ಹೂಡಿಕೆ ಮಾಡಬಹುದೆಂದು ವಿಧಿಸುತ್ತದೆ. ಅದನ್ನು ನಮ್ಮ ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ. 66 ದಿನಾಂಕ ಜನವರಿ 13, 2003ರ ಅನುಸಾರವಾಗಿ ಮಾಡಲಾಗಿತ್ತು. ಇದನ್ನು ಹೆಚ್ಚುವರಿ ಸೌಲಭ್ಯವನ್ನಾಗಿ ಮುಂದುವರಿಸಲಾಯಿತು. ಪ್ರಸ್ತುತ ಎಲ್‌ಆರ್‌ಎಸ್ ಅಂಥ ಯಾವುದೇ ಷರತ್ತನ್ನು ವಿಧಿಸಿಲ್ಲ.

III. ಯೋಜನೆಯ ಅಡಿಯಲ್ಲಿ, ಹಣಕಾಸು ಮಧ್ಯವರ್ತಿಗಳಿಗಾಗಿ ವಿಶೇಷ ಯೋಜನೆಗಳು ಹಾಗೂ ರಕ್ಷಣೆ ನೀಡುವ ಮಾರ್ಗದರ್ಶನ ಸೂತ್ರಗಳು

(42) ಕಕ್ಷಿದಾರರಿಗೆ ಲಭ್ಯವಿರುವ ಓವರ್‌ಸೀಸ್ ಹೂಡಿಕೆಗಳನ್ನು ಮಾಡುವುದಕ್ಕಾಗಿ ಮಧ್ಯವರ್ತಿಗಳು ನಿರ್ದಿಷ್ಟ ಅನುಮೋದನೆಯನ್ನು ಕೋರಲು ನಿರೀಕ್ಷಿಸಲಾಗಿದೆಯೆ?

ಭಾರತದಲ್ಲಿ ಕಾರ್ಯಾಚರಣೆ ಹೊಂದಿಲ್ಲದಿರುವುಗಳನ್ನು ಒಳಗೊಂಡು ಬ್ಯಾಂಕ್‌ಗಳು ತಮ್ಮ ವಿದೇಶಿ/ ಓವರ್‌ಸೀಸ್ ಶಾಖೆಗಳಿಗಾಗಿ ಠೇವಣಿಗಳನ್ನು ಪಡೆಯುವುದಕ್ಕಾಗಿ ಅಥವಾ ಓವರ್‌ಸೀಸ್ ಮ್ಯೂಚುಯಲ್ ಫಂಡ್‌ಗಳಿಗಾಗಿ ಅಥವಾ ಯಾವುದೇ ಇತರ ವಿದೇಶಿ ಹಣಕಾಸು ಸೇವೆಗಳ ಕಂಪನಿಗಾಗಿ ಏಜೆಂಟರೆಂದು ಕಾರ್ಯನಿರ್ವಹಿಸುವುದಕ್ಕಾಗಿ ರಿಜರ್ವ್ ಬ್ಯಾಂಕಿನಿಂದ ಪೂರ್ವ ಅನುಮೋದನೆಯನ್ನು ಪಡೆಯಬೇಕಾಗುವುದು.

(43) ಒಬ್ಬ ವ್ಯಕ್ತಿಯು ಹೂಡಬಹುದಾದ ಸಾಲ ಅಥವಾ ಈಕ್ವಿಟಿ ಲಿಖಿತಗಳ ಪ್ರಕಾರ ಗುಣಮಟ್ಟದ ಮೇಲೆ ಯಾವುವೇ ನಿರ್ಬಂಧನೆಗಳು ಇವೆಯೆ?

ಒಬ್ಬ ವ್ಯಕ್ತಿಯು ಮಾಡಬಹುದಾದ ಡಾಲರ್‌ನ ಉದಾರೀಕೃತ ರವಾನೆ ಯೋಜನೆಯ ಯುಎಸ್ ಡಾಲರ್ 25000 ಅಡಿಯಲ್ಲಿ ಹೂಡಿಕೆಯ ಗುಣಮಟ್ಟದ ಮೇಲೆ ಯಾವುವೇ ರೇಟಿಂಗ್ ಅಥವಾ ಮಾರ್ಗದರ್ಶನ ಸೂತ್ರಗಳನ್ನು ಗೊತ್ತುಪಡಿಸಿಲ್ಲ. ಆದಾಗ್ಯೂ, ಅವನು ಅಥವಾ ಅವಳು ಮಾಡಲು ಉದ್ದೇಶಿಸಿದ ಹೂಡಿಕೆಗಳ ಸಂಬಂಧದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವಾಗ ಹೂಡಿಕೆದಾರನು ಸೂಕ್ತ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

(44) ಓವರ್‌ಸೀಸ್ ಶಾಖೆ ಇರುವ ದೇಶದಲ್ಲಿ ಸ್ಥಳೀಯ ಕಾನೂನಿನ ಪ್ರಕಾರ ಅದು ಅನುಮತೀಯವಾಗಿದ್ದರೆ ಅಪ್ರಾಪ್ತ ವಯಸ್ಕ ನಿವಾಸಿ ವ್ಯಕ್ತಿಗಲು ಅಂಥ ವಿದೇಶಿ ಕರೆನ್ಸಿ ಖಾತೆಗಳನ್ನು ತೆರೆಯಲು, ನಿರ್ವಹಿಸಿಕೊಂಡು ಬರಲು ಮತ್ತು ಹೊಂದಲು ಅನುಮತಿಸಲಾಗುವುದೇ?

ರವಾನೆಯನ್ನು ಅಪ್ರಾಪ್ತ ವಯಸ್ಕನ ಪರವಾಗಿ ಮಾಡಲಾಗಿರುವ ಸಂದರ್ಭದಲ್ಲಿ ಘೋಷಣೆಯ ಜಾರಿಯ ಸಂಬಂಧದಲ್ಲಿ ಸುಸ್ಥಾಪಿತ ಕಾನೂನು ಸ್ಥಿತಿಯ ಮೇಲೆ ಆಧಾರಿತವಾದ ವಿಷಯದಲ್ಲಿ ಬ್ಯಾಂಕ್‌ಗಳು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬಹುದು.

(45) ಭಾರತೀಯ ರೂಪಾಯಿಗಳಲ್ಲಿ ಅಥವಾ ವಿದೇಶಿ ಕರೆನ್ಸಿಯಲ್ಲಿ ಅಂಥ ಠೇವಣಿಗಳ ಭದ್ರತೆಯ ಆಧಾರದ ಮೇಲೆ ಕ್ರೆಡಿಟ್ ಸೌಲಭ್ಯಗಳು ಅನುಮತೀಯವೇ?

ಇಲ್ಲ, ಠೇವಣಿಗಳ ಭದ್ರತೆಯ ಆಧಾರದ ಮೇಲೆ ಕ್ರೆಡಿಟ್ ಸೌಲಭ್ಯವನ್ನು ವಿಸ್ತರಿಸಲು ಯೋಜನೆಯು ವಿವರಿಸಿಲ್ಲ.

(46) ಯೋಜನೆಯ ಅಡಿಯಲ್ಲಿ ನಿವಾಸಿಗಳಿಗಾಗಿ ಭಾರತದಲ್ಲಿ ವಿದೇಶಿ ಕರೆನ್ಸಿ ಖಾತೆಗಳನ್ನು ಬ್ಯಾಂಕರ್‌ಗಳು ತೆರೆಯಬಹುದೇ?

ಇಲ್ಲ, ಯೋಜನೆಯ ಅಡಿಯಲ್ಲಿ ನಿವಾಸಿಗಳಿಗಾಗಿ ಭಾರತದಲ್ಲಿ ವಿದೇಶಿ ಕರೆನ್ಸಿ ಖಾತೆಯನ್ನು ಭಾರತದಲ್ಲಿನ ಬ್ಯಾಂಕ್‌ಗಳು ತೆರೆಯಲಾಗದು.

(47) ಯೋಜನೆಯ ಅಡಿಯಲ್ಲಿ ನಿವಾಸಿಗಳು ವಿದೇಶಿ ಕರೆನ್ಸಿ ಖಾತೆಗಳನ್ನು ತೆರೆಯುವ ಉದ್ದೇಶಕ್ಕಾಗಿ ಭಾರತದಲ್ಲಿ ಆಫ್‌ಶೋರ್ ಬ್ಯಾಂಕಿಂಗ್ ಯೂನಿಟ್, (ಒಬಿಯು) ಭಾರತದ ಹೊರಗಡೆ ಬ್ಯಾಂಕಿನ ಶಾಖೆಯೊಂದಿಗೆ ಸಮಾನವೆಂದು ಪರಿಗಣಿಸಬಹುದೇ?

ಇಲ್ಲ, ಯೋಜನೆಯ ಉದ್ದೇಶಕ್ಕಾಗಿ ಭಾರತದಲ್ಲಿರುವ ಒಂದು ಒಬಿಯು ಇದನ್ನು ಭಾರತದಲ್ಲಿನ ಓವರ್‌ಸೀಸ್ ಶಾಕೆಯೆಂದು ಪರಿಗಣಿಸಲಾಗುವುದಿಲ್ಲ.

ಸಾಮಾನ್ಯ ಮಾಹಿತಿ

ಹೆಚ್ಚಿನ ವಿವರಗಳು/ ಮಾರ್ಗದರ್ಶನಗಳಿಗಾಗಿ ರಿಜರ್ವ್ ಬ್ಯಾಂಕಿನ ವಿದೇಶಿ ವಿನಿಮಯ ಇಲಾಖೆಯ ಪ್ರಾದೇಶಿಕ ಕಚೇರಿಗಳನ್ನು ಅಥವಾ ವಿದೇಶಿ ವಿನಿಮಯದಲ್ಲಿ ವ್ಯವಹರಿಸಲು ಅಧಿಕೃತಗೊಳಿಸಿದ ಯಾವುದೇ ಬ್ಯಾಂಕನ್ನು ದಯವಿಟ್ಟು ಸಂಪರ್ಕಿಸಿ.